- ಸಂಘದ ಆಡಳಿತ ಮಂಡಳಿಯಲ್ಲಿ ಕನಿಷ್ಠ ಶೇಕಡಾ 30ರಷ್ಟು ಮಹಿಳೆಯರು ಹಾಗೂ ದುರ್ಬಲ ವರ್ಗದವರು ಭಾಗವಹಿಸುವಂತೆ ಉತ್ತೇಜಿಸುವುದು;
- ಆಧುನೀಕರಣ ಕಾಮಗಾರಿಗಳು, ಹೊಲಗಾಲುವೆಗಳ ಕಾಮಗಾರಿಯ ಕ್ರಿಯಾ ಯೋಜನೆ ಸಿದ್ಧಪಡಿಸುವಿಕೆ, ಅನುಷ್ಠಾನ, ಗುಣಮಟ್ಟ ಪರಿಶೀಲನೆ ಮತ್ತು ಕಾಲುವೆಗಳಿಂದ ಕಾಲಕಾಲಕ್ಕೆ ಹೂಳು–ಕಳೆ–ಗಿಡ–ಕಂಟಿ ತೆಗೆಯುವ ಕಾರ್ಯದಲ್ಲಿ ಭಾಗವಹಿಸುವುದು;
- ಬೆಳೆಗೆ ತಕ್ಕ ನೀರಿನ ಸರಬರಾಜು ಚಟುವಟಿಕೆಗಳಲ್ಲಿ ಹಾಗೂ ಕಾಲುವೆಗಳ ದುರಸ್ಥಿಯಲ್ಲಿ ಭಾಗವಹಿಸುವುದು;
- ಕೃಷಿ ಮತ್ತು ಕೃಷಿ ಸಂಬಂಧಿತ ಪ್ರಾತ್ಯಕ್ಷಿಕೆಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸುವುದು–ಅಂದರೆ ಬೀಜ ಶುದ್ಧೀಕರಣ, ಬಿತ್ತನೆ ಮತ್ತು ಸಸಿಮಡಿ ಅಭಿವೃದ್ಧಿ, ನಾಟಿ, ಕಳೆ ತೆಗೆಯುವುದು, ಗೊಬ್ಬರ ಹಾಕುವುದು, ನೀರು ಕಟ್ಟುವುದು, ಕಟಾವು, ಉತ್ಪನ್ನಗಳ ಸಂಗ್ರಹ, ಮೌಲ್ಯವರ್ಧನೆ ಮಾರಾಟ ಮುಂತಾದ ಕೆಲಸಗಳಲ್ಲಿ ಭಾಗವಹಿಸುವುದು;
- ಪಶು ಸಂಗೋಪನೆ, ಹೈನುಗಾರಿಕೆ, ಗೃಹ ಕೈಗಾರಿಕೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಜೀವನಾಧಾರ ಚಟುವಟಿಕೆಗಳಲ್ಲಿ ಭಾಗವಹಿಸುವುದು.

**ಮಹಿಳೆಯರ ಸಕ್ರಿಯವಾಗಿ ಭಾಗವಹಿಸುವಿಕೆಗೆ ಉತ್ತೇಜನ ವಿಧಾನಗಳು**

ಮಹಿಳೆಯರನ್ನು ನೀರಾವರಿ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ವಿ.ಎನ್.ಸಿ ಯೋಜನೆಯ ಉದ್ದೇಶಗಳಲ್ಲಿ ಪ್ರಮುಖವಾದುದು. ಯೋಜನೆಯಲ್ಲಿ ಮಹಿಳೆಯರಿಗಾಗಿ ಹಮ್ಮಿಕೊಳ್ಳುತ್ತಿರುವ ಕೆಲವು ಕಾರ್ಯಕ್ರಮಗಳ ವಿವರ ಹೀಗಿದೆ;

- ನೀ.ಬ.ಸ.ಸಂ.ಗಳಲ್ಲಿ ಮಹಿಳೆಯರ ಸದಸ್ಯತ್ವ ಹೆಚ್ಚಿಸುವುದು.
- ಆಡಳಿತ ಮಂಡಳಿಯಲ್ಲಿ ಮಹಿಳೆಯರ ಸಂಖ್ಯೆಯನ್ನು ಕನಿಷ್ಠ ಶೇಕಡ 30ರಷ್ಟು ಉತ್ತೇಜಿಸುವುದು.
- ಕೃಷಿ ಮತ್ತು ಕೃಷಿ ಸಂಬಂಧಿತ ಪ್ರಾತ್ಯಕ್ಷಿಕೆಗಳಲ್ಲಿ ಮಹಿಳಾ ಪ್ರಧಾನ ರೈತರನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ತರಬೇತಿ ನೀಡುವುದು.
- ಗೃಹ ಮತ್ತು ಜೀವನೋಪಾಯ ಚಟುವಟಿಕೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಮೊದಲ ಆದ್ಯತೆ ನೀಡುವುದು.

**ಕಾರ್ಯತಂತ್ರಗಳು**

- ಯೋಜನೆಯಲ್ಲಿ ಮಹಿಳಾ ಸಮುದಾಯ ಸಂಘಟಕರನ್ನು ನೇಮಿಸಿದ್ದು ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಗೆ ಪ್ರೇರಣೆಯಾಗುವುದು;
- ಆರಂಭಿಕ ಹಂತಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದ ಸಭೆಗಳನ್ನು ಏರ್ಪಡಿಸುವುದು.
- ಪ್ರತಿ ಸಂಘದ ವ್ಯಾಪ್ತಿಯಲ್ಲಿ ಕನಿಷ್ಠ 15 ಸದಸ್ಯರನ್ನೊಳಗೊಂಡ ಮಹಿಳಾ ಉಪಸಮಿತಿಗಳ ರಚನೆ ಮೂಲಕ ಪಾಲ್ಗೊಳ್ಳುವಿಕೆಗೆ ಉತ್ತೇಜನ ನೀಡುವುದು;
- ಮಹಿಳೆಯರಿಗೆ ಮತ್ತು ದುರ್ಬಲ ವರ್ಗದವರಿಗೆ ಸಂಘದ ಆಡಳಿತ ವಿಷಯಗಳ ಬಗೆಗೆ ವಿಶೇಷ ತರಬೇತಿ ನೀಡುವುದು;
- ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಕಾಮಗಾರಿಗಳ (ಕ್ಯಾಡ್) ಅನುಷ್ಠಾನದಲ್ಲಿ ಮಹಿಳೆಯರು ಪಾಲ್ಗೊಳ್ಳಲು ಉತ್ತೇಜನ ನೀಡುವುದು ಹಾಗೂ ಉಸ್ತುವಾರಿ ಮತ್ತು ನಿರ್ವಹಣೆಯಲ್ಲಿ ಮಹಿಳೆಯರು ಕ್ರಿಯಾಶೀಲವಾಗಿ ಭಾಗವಹಿಸಲು ಸಾಮರ್ಥ್ಯವರ್ಧನೆ;
- ಮಹಿಳೆಯರಿಗೆ ಮತ್ತು ದುರ್ಬಲ ವರ್ಗದವರಿಗೆ ಪ್ರತ್ಯೇಕವಾದ ಔಪಚಾರಿಕ ಮತ್ತು ಅನೌಪಚಾರಿಕ ಸಭೆ, ತರಬೇತಿ, ಕಾರ್ಯಾಗಾರ ಮತ್ತು ಅಧ್ಯಯನ ಪ್ರವಾಸಗಳನ್ನು ಕೈಗೊಳ್ಳುವುದು;
- ನೀರಾವರಿ, ಕೃಷಿ ಮತ್ತು ಇತರ ಜೀವನಾಧಾರ ಚಟುವಟಿಕೆಗಳ ಬಗ್ಗೆ ವಿಶೇಷ ಅರಿವು ಮೂಡಿಸುವುದು ಹಾಗೂ ಉತ್ತೇಜಿಸುವುದು;
- ನೀರಾವರಿ ಮತ್ತು ಕೃಷಿ ಸಂಬಂಧಿತ ವಿಷಯಗಳ ಬಗೆಗೆ ಮಹಿಳೆಯರಿಗೆ ಮತ್ತು ದುರ್ಬಲ ವರ್ಗದವರಿಗೆ ವಿಶೇಷ ವಿಸ್ತರಣಾ ಸೇವೆಗಳನ್ನು ನೀಡುವುದು;
- ಮಹಿಳಾ ಸ್ನೇಹಿ ತಂತ್ರಜ್ಞಾನಗಳನ್ನು ಗುರುತಿಸಿ ಅಳವಡಿಕೆಗೆ ಪ್ರೋತ್ಸಾಹಿಸುವುದು.
- ಸರ್ಕಾರದ ವಿವಿಧ ಇಲಾಖೆ, ಸರ್ಕಾರೇತರ ಹಾಗೂ ಹಣಕಾಸು ಸಂಸ್ಥೆಗಳು ಮತ್ತು ಸಂಘಗಳ ಜೊತೆ ಸಮನ್ವಯತೆ ಸಾಧಿಸಿ ಮಹಿಳೆಯರಿಗೆ ಮತ್ತು ದುರ್ಬಲ ವರ್ಗದವರಿಗೆ ಸೌಲಭ್ಯಗಳು ಒದಗುವಂತೆ ಮಾಡುವುದು.

**ನಿರೀಕ್ಷಿತ ಫಲಗಳು**

ಮೇಲೆ ತಿಳಿಸಿದಂತೆ ಮಹಿಳೆಯರ ಭಾಗವಹಿಸುವಿಕೆಗೆ ಉತ್ತೇಜನ ನೀಡಿದಲ್ಲಿ ಈ ಪರಿಣಾಮಗಳನ್ನು ನಿರೀಕ್ಷಿಸಬಹುದು;

1. ಸಾಮಾಜಿಕ ನ್ಯಾಯ, ಆರ್ಥಿಕ ಅಭಿವೃದ್ಧಿ ಹಾಗೂ ಜೀವನಾಧಾರ ಸುಧಾರಣೆ.
2. ಕಾಮಗಾರಿಗಳ ಪರಿಶೀಲನೆ, ಗುಣಮಟ್ಟ ಖಾತ್ರಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಳ.
3. ನೀರು ಬಳಕೆದಾರರ ಸಹಕಾರ ಸಂಘಗಳಲ್ಲಿ ಮಹಿಳೆಯರು ಮತ್ತು ದುರ್ಬಲ ವರ್ಗಗಳ ಪ್ರಾತಿನಿಧ್ಯ ಹೆಚ್ಚಳ.
4. ಮಹಿಳೆಯರಲ್ಲಿ ಸಂಘಟನೆ, ನಾಯಕತ್ವ ಮತ್ತು ತೀರ್ಮಾನ ತೆಗೆದುಕೊಳ್ಳುವ ಮನೋಭಾವವೃದ್ಧಿ.
5. ಕೃಷಿ, ನೀರು ನಿರ್ವಹಣೆ, ಬೆಳೆ ವೈವಿಧ್ಯತೆ ಮತ್ತು ಉಸ್ತುವಾರಿಯಲ್ಲಿ ಮಹಿಳೆಯರ ಜ್ಞಾನ ಹೆಚ್ಚಳ.
6. ಮಹಿಳೆಯರಿಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು ಹಾಗೂ ಇತರೆ ಬಳಕೆಗೆ ನೀರಿನ ಲಭ್ಯತೆ.
7. ಉತ್ಪಾದಕತೆಯಲ್ಲಿ ಹೆಚ್ಚಳ, ಸಂಪನ್ಮೂಲಗಳ ಸುಸ್ಥಿರ ಹಾಗೂ ಸಮರ್ಪಕ ಬಳಕೆ.
8. ಆರೋಗ್ಯ, ವಿದ್ಯಾಭ್ಯಾಸ ಹಾಗೂ ಉತ್ತಮ ಪರಿಸರ ನಿರ್ಮಾಣ.


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**ಕರ್ನಾಟಕ ನೀರಾವರಿ ನಿಗಮ ನಿ.**
ಯೋಜನಾ ಅನುಷ್ಠಾನ ಕಛೇರಿ ಮುನಿರಾಬಾದ್, ಕೊಪ್ಪಳ–583233

**ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ತುಂಗಭದ್ರಾ ಯೋಜನೆ ಮುನಿರಾಬಾದ್, ಕೊಪ್ಪಳ–583233

**ಯೋಜನಾ ಸಹಾಯಕ ಸಮಾಲೋಚಕ ತಂಡ**
ಇಜಿಐಎಸ್, ನಂ 87, ಸೀತಾ ಕುಂಜ, 5ನೇ ಅಡ್ಡರಸ್ತೆ,
ಮೃತ್ಯುಂಜಯನಗರ ಹೊಸಪೇಟೆ–583201, ವಿಜಯನಗರ ಜಿಲ್ಲೆ


ADB

egis India


ಶ್ರೀ ಸಂಜಯೇಶ್ವರ ಪ್ರಿಂಟರ್ಸ್, ಬೆಂಗಳೂರು–10


ಕರ್ನಾಟಕ ಸರ್ಕಾರ

# ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮ

## ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆ



## ನೀರಾವರಿ ನಿರ್ವಹಣೆಯಲ್ಲಿ ಮಹಿಳೆಯರು ಮತ್ತು ದುರ್ಬಲ ವರ್ಗಗಳ ಪಾಲ್ಗೊಳ್ಳುವಿಕೆ

## ಕಾರ್ಯಕ್ರಮ ಮತ್ತು ಗುರಿ

ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಕಾರ್ಯಕ್ರಮವನ್ನು ಗೊಂದಿ ಮತ್ತು ವಿಜಯನಗರ ಕಾಲುವೆಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ಸಮಗ್ರ ದೃಷ್ಟಿಕೋನದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಸರ್ಕಾರವು ಈ ಯೋಜನೆಯನ್ನು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ)ನ ಆರ್ಥಿಕ ನೆರವಿನಡಿ ಕಾರ್ಯಗತಗೊಳಿಸುತ್ತಿದೆ. ನೀರಾವರಿ ಕ್ಷೇತ್ರದಲ್ಲಿ ನೀರಿನ ಬಳಕೆಯ ಸಾಮರ್ಥ್ಯವನ್ನು ಸುಧಾರಿಸುವ ಮೂಲಕ ಹೆಚ್ಚು ಆರ್ಥಿಕ ಅವಕಾಶಗಳನ್ನು ಕಲ್ಪಿಸುವುದು ಮತ್ತು ಗ್ರಾಮೀಣ ಆದಾಯ ಹೆಚ್ಚಿಸುವ ಗುರಿಯನ್ನು ಈ ಕಾರ್ಯಕ್ರಮವು ಹೊಂದಿದೆ.

ಈ ಗುರಿಯನ್ನು ತಲುಪಬೇಕಾದರೆ, ಮಹಿಳೆಯರ ಮತ್ತು ದುರ್ಬಲ ವರ್ಗದವರ ಸಹಭಾಗಿತ್ವ ಅತ್ಯವಶ್ಯಕ. ಅವರನ್ನು ನೀರಾವರಿ ನಿರ್ವಹಣೆಯ ಮುಖ್ಯವಾಹಿನಿಗೆ ತರುವುದು ಮತ್ತು ವಿ.ಎನ್.ಸಿ ಯೋಜನೆಯಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳಲು ಉತ್ತೇಜನ ನೀಡುವ ಮೂಲಕ ಈ ಯೋಜನೆಯ ಫಲವು ಎಲ್ಲ ವರ್ಗಗಳ ಜನರಿಗೆ ತಲುಪಬೇಕು.

## ಮಹಿಳೆಯರ ಮತ್ತು ದುರ್ಬಲ ವರ್ಗಗಳ ಸಹಭಾಗಿತ್ವದ ಉದ್ದೇಶ

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಡಿಯಲ್ಲಿ ಸಮಗ್ರ ದೃಷ್ಟಿಕೋನವನ್ನು ಅಳವಡಿಸಿಕೊಂಡಿದ್ದು, ನೀರಾವರಿ ವ್ಯವಸ್ಥೆಯಲ್ಲಿ ಭಾಗಿಯಾಗಿರುವ ಎಲ್ಲಾ ವರ್ಗಗಳನ್ನು ಗಮನದಲ್ಲಿರಿಸಿಕೊಂಡು ವಿನ್ಯಾಸಗೊಳಿಸಲಾಗಿದೆ. ಇದರ ಅಂಗವಾಗಿ ಅಚ್ಚುಕಟ್ಟಿನ ವ್ಯಾಪ್ತಿಯ ಮಹಿಳೆಯರ ಮತ್ತು ದುರ್ಬಲ ವರ್ಗಗಳ ಶ್ರೇಯಸ್ಸಿಗಾಗಿ ಅವಶ್ಯಕವಾದ ಸಾಮರ್ಥ್ಯ ಬಲವರ್ಧನೆಗೊಳಿಸುವ ಪ್ರಯತ್ನಗಳನ್ನು ಮಾಡಲಾಗುವುದು.

ಯೋಜನೆಯ ಮುಖ್ಯ ಗುರಿಯಾದ ಜೀವನಾಧಾರ ಸುಧಾರಣೆಗಾಗಿ ಲಭ್ಯ ಜಲ ಸಂಪನ್ಮೂಲವನ್ನು ಫಲಕಾರಿ, ಪರಿಣಾಮಕಾರಿ ಹಾಗೂ ನಿರಂತರವಾಗಿ ನಿರ್ವಹಿಸುವಲ್ಲಿ ಮಹಿಳೆಯರು ಮತ್ತು ಪುರುಷರು ಯೋಜನೆಯ ಎಲ್ಲಾ ಹಂತಗಳಲ್ಲಿ–ಅಂದರೆ ಸಿದ್ಧಪಡಿಸುವಿಕೆ, ಅನುಷ್ಠಾನ ಹಾಗೂ ನಿರ್ವಹಣೆಯಲ್ಲಿ ಸಮಾನವಾಗಿ ಪಾಲ್ಗೊಳ್ಳಬೇಕಾಗಿರುತ್ತದೆ. ಇದರಿಂದ ಪುರುಷರು ಮತ್ತು ಮಹಿಳೆಯರು ನಿರ್ಣಯಗಳನ್ನು ಕೈಗೊಳ್ಳುವಲ್ಲಿ, ಅನುಷ್ಠಾನದ ಜವಾಬ್ದಾರಿ ಹಂಚಿಕೊಳ್ಳುವಲ್ಲಿ ಮತ್ತು ಅದರ ಫಲವನ್ನು ಅನುಭವಿಸುವಲ್ಲಿ ಸಮಾನವಾಗಿ ಭಾಗಿಗಳಾಗುವರು.

## ಮಹಿಳೆಯರ ಮತ್ತು ದುರ್ಬಲ ವರ್ಗಗಳ ಸಹಭಾಗಿತ್ವದ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ ;

- ಮಹಿಳೆಯರು ಮತ್ತು ದುರ್ಬಲ ವರ್ಗಗಳು ಯೋಜನೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ವಿಶೇಷ ಆದ್ಯತೆ ನೀಡುವುದು;
- ಸಹಭಾಗಿತ್ವದ ನೀರಾವರಿ ನಿರ್ವಹಣೆ ಪ್ರಕ್ರಿಯೆಯಲ್ಲಿ ಪುರುಷ ಮತ್ತು ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವುದು;
- ಅಚ್ಚುಕಟ್ಟಿನ ಎಲ್ಲಾ ರೈತರಿಗೆ ನೀರಿನ ಸಮಾನ ಹಂಚಿಕೆ, ನಿರ್ದಿಷ್ಟವಾಗಿ ಮಹಿಳೆಯರು, ಸಣ್ಣ, ಅತಿಸಣ್ಣ ಹಾಗೂ ಕಾಲುವೆ ಕೊನೆಯ ಭಾಗದ ರೈತರಿಗೆ ಹೆಚ್ಚಿನ ಆದ್ಯತೆ ಮೇರೆಗೆ ನೀರು ದೊರೆಯುವಂತೆ ಮಾಡುವುದು.

ರಾಜ್ಯ ಸರ್ಕಾರವು ಮಹಿಳೆಯರ ಸಹಭಾಗಿತ್ವದ ಮಹತ್ವವನ್ನು ಅರಿತು ಪ್ರತಿ ನೀ.ಬ.ಸ. ಸಂಘಗಳಲ್ಲಿ ಒಟ್ಟು 12 ಚುನಾಯಿತ ಆಡಳಿತ ಮಂಡಳಿ ನಿರ್ದೇಶಕರುಗಳಲ್ಲಿ 2 ಸ್ಥಾನಗಳನ್ನು ಮಹಿಳೆಯರಿಗೆ (18%) ಮೀಸಲಿರಿಸಿದೆ. ಎಡಿಬಿ ಯೋಜನೆಯ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎಲ್ಲಾ ಹಂತಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಶೇ.30ರಷ್ಟಿರಬೇಕು ಎನ್ನುತ್ತದೆ. ಇದನ್ನು ಸಾಧಿಸಬೇಕಾದರೆ ಆಡಳಿತ ಮಂಡಳಿಯಲ್ಲಿ ಮಹಿಳೆಯರಿಗೆ ಮೀಸಲಾಗಿರುವ 2 ಸ್ಥಾನಗಳ ಜೊತೆಗೆ, ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವ 6 ಸ್ಥಾನಗಳು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ 2 ಮತ್ತು ಹಿಂದುಳಿದ ವರ್ಗಕ್ಕೆ ಮೀಸಲಿರಿಸಿದ 2 ಸ್ಥಾನಗಳ ಪೈಕಿ ಮಹಿಳಾ ನಿರ್ದೇಶಕರುಗಳನ್ನು ಚುನಾಯಿಸಿಕೊಂಡು ನಿರ್ದೇಶಕ ಮಂಡಳಿಯಲ್ಲಿ ಶೇಕಡಾ 30ಕ್ಕಿಂತಲೂ ಹೆಚ್ಚಿನ ಸದಸ್ಯರಿರುವಂತೆ ನೋಡಿಕೊಂಡಲ್ಲಿ ವಿ.ಎನ್.ಸಿ ವ್ಯಾಪ್ತಿಯ ಸಂಘಗಳು ಮಾದರಿಯಾಗಲು ಸಾಧ್ಯವಿದೆ ಹಾಗೂ ಎಡಿಬಿ ನಿಯಮಾವಳಿಗಳನ್ನು ಅನುಸರಿಸಿದಂತಾಗುತ್ತದೆ.

ಇದರ ಜೊತೆಗೆ, ವಿ.ಎನ್.ಸಿ ಮಹಿಳಾ ಉಪ ಸಮಿತಿಗಳಿಂದ 4 ಮಹಿಳಾ ಸದಸ್ಯರನ್ನು 'ಡಿ' ವರ್ಗದಡಿಯಲ್ಲಿ ಆಯ್ಕೆ ಮಾಡಿ, ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸುವಂತೆ ಮಾಡಿದಲ್ಲಿ ವಿಜಯನಗರ ಕಾಲುವೆಗಳ ನೀರು ಬಳಕೆದಾರರ ಸಹಕಾರ ಸಂಘಗಳು ಇಡೀ ರಾಜ್ಯಕ್ಕೆ ಮಾದರಿಯಾಗಬಹುದು.

ನಿರ್ದೇಶಕ ಮಂಡಳಿಗೆ ಪೂರಕವಾಗಿ, ವಿ.ಎನ್.ಸಿ ಯೋಜನೆಯಡಿ ಸಂಘಗಳ ಸದಸ್ಯತ್ವ, ತರಬೇತಿ, ಅಧ್ಯಯನ ಪ್ರವಾಸ, ಕ್ರಿಯಾಯೋಜನೆ ತಯಾರಿ, ಅನುಷ್ಠಾನ ಇತ್ಯಾದಿ ಎಲ್ಲಾ ಚಟುವಟಿಕೆಗಳಲ್ಲಿ ಮಹಿಳೆಯರ ಸಹಭಾಗಿತ್ವ ಕನಿಷ್ಠ ಶೇಕಡಾ 30 ಇರಬೇಕೆಂದು ಗುರಿ ನಿಗದಿಪಡಿಸಲಾಗಿದೆ.



## ಮಹಿಳೆಯರ ಮತ್ತು ಪುರುಷರ ಸಹಭಾಗಿತ್ವ

ಮಹಿಳೆಯರು ಕೃಷಿಯ ಬಹುತೇಕ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಕಾಣಬಹುದು. ಅವರು ಕೃಷಿ ಅಭಿವೃದ್ಧಿರಂಗದಲ್ಲಿ ಮುಖ್ಯ ಪಾತ್ರದಲ್ಲಿರುವುದು ಗಮನಾರ್ಹ. ಮಹಿಳೆಯರು ಕೃಷಿ ಚಟುವಟಿಕೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ತೊಡಗಿದ್ದರೂ ಸಹ ತರಬೇತಿ ಮತ್ತು ಸಾಮರ್ಥ ಹೆಚ್ಚಿಸುವ ಕಾರ್ಯಕ್ರಮಗಳಲ್ಲಿ ಅವರನ್ನು ಸಂಪೂರ್ಣವಾಗಿ ಪರಿಗಣಿಸದೇ ಇರುವುದರಿಂದ ಯೋಜನೆಗಳಲ್ಲಿ ನಿರೀಕ್ಷಿಸಿದ ಫಲ ದೊರೆಯುತ್ತಿಲ್ಲ. ಜಮೀನಿನ ಒಡೆತನ ಬಹುತೇಕ ಪುರುಷರ ಹೆಸರಿನಲ್ಲಿರುತ್ತದೆ. ಆದರೆ ಜಮೀನಿನಲ್ಲಿ ಹೆಚ್ಚಿನ ಕೆಲಸ ಕಾರ್ಯಗಳ ಹೊರೆ ಮಾತ್ರ ಮಹಿಳೆಯರದ್ದಾಗಿರುತ್ತದೆ. ಇದು ಸಮಂಜಸವಲ್ಲ. ಗಂಡನಿಂದ ಅಥವಾ ತಂದೆಯಿಂದ ಬಂದ ಜಮೀನು ಮಹಿಳೆಯರ ಹೆಸರಿನಲ್ಲಿದ್ದು ಅವರು ಖಾತೆದಾರರಾಗಿದ್ದರೂ ಸಹ ಎಷ್ಟೋ ಸಂಘಗಳಲ್ಲಿ ಮಹಿಳೆಯರನ್ನು ಕಡೆಗಣಿಸಲಾಗಿದೆ. ಇದರಿಂದಾಗಿ ನೀ.ಬ.ಸ.ಸಂ.ಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಕುಂಠಿತವಾಗಿದೆ.

ಮಹಿಳೆಯರಿಗೆ ಸಂಘಗಳ ಸದಸ್ಯತ್ವದಲ್ಲಿ ಮತ್ತು ನಿರ್ದೇಶಕ ಮಂಡಳಿಯಲ್ಲಿ ಸ್ಥಾನ ಕಲ್ಪಿಸಿದೆ ಅದರಲ್ಲಿ ಮಹಿಳೆಯರು ಕೂಡಾ ಪುರುಷರಂತೆ ತಮ್ಮ ಅನುಭವಗಳ ಆಧಾರದಲ್ಲಿ ಸಲಹೆ–ಸೂಚನೆಗಳನ್ನು ನೀಡಿ ಸುಸ್ಥಿರ ಕೃಷಿ ಮತ್ತು ನಿರಂತರ ನೀರಾವರಿ ನಿರ್ವಹಣೆಯಲ್ಲಿ ಸಮಾನವಾಗಿ ಭಾಗಿಯಾಗಲು ಸಾಧ್ಯ. ಈ ರೀತಿ ಆದಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವುದಲ್ಲದೆ ಸಹಭಾಗಿತ್ವಕ್ಕೆ ಒಂದು ಶ್ರೇಷ್ಠ ಅರ್ಥ ಬರುವುದು.

## ಕೃಷಿಯಲ್ಲಿ ಮಹಿಳೆಯರ ಪಾತ್ರ

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಕೌಟುಂಬಿಕ ಹಾಗೂ ಕೃಷಿ ಜಮೀನಿನಲ್ಲಿ ಕೆಲಸ ಮಾಡುವುದು ಸರ್ವೇಸಾಮಾನ್ಯ, ಅದರಲ್ಲಿಯೂ ಕೃಷಿ ಚಟುವಟಿಕೆಗಳು ದೈಹಿಕ ಬಲವನ್ನು ಅವಲಂಬಿಸಿರುತ್ತದೆ. ಅಂತದರಲ್ಲಿ ಮಹಿಳೆಯರಿಗೆ ಕೆಲಸದ ಶ್ರಮ ಹೆಚ್ಚು, ಲಭ್ಯವಿರುವ ಮಾಹಿತಿಯಂತೆ ಪುರುಷರು ದಿನಕ್ಕೆ 7–8 ಗಂಟೆ ದುಡಿದರೆ, ಮಹಿಳೆಯರು ದಿನಕ್ಕೆ ಸರಾಸರಿ 15 ಗಂಟೆ ದುಡಿಯುವರು. ಆದರೂ ಸಹ ಮಹಿಳೆಯರಿಗೆ ಭೂ ಮತ್ತು ಜಲ ನಿರ್ವಹಣೆ, ಸಮಸ್ಯೆಗಳ ವಿಶ್ಲೇಷಣೆ ಮತ್ತು ನಿರ್ಣಯಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸಲು ಅವಕಾಶ ನೀಡದಿರುವುದರಿಂದ ಸಂಪನ್ಮೂಲಗಳ ಸರ್ಮಪಕ ನಿರ್ವಹಣೆ ಆಗುತ್ತಿಲ್ಲ.

ಜಲ ಸಂಪನ್ಮೂಲ ನಿರ್ವಹಣೆಯಲ್ಲಿ ಮಹಿಳೆಯರ ಮತ್ತು ದುರ್ಬಲ ವರ್ಗದವರ ಭಾಗವಹಿಸುವಿಕೆ ಕಡಿಮೆ ಇರಲು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಪ್ರದಾಯಿಕ ಪದ್ಧತಿಗಳು ಇತ್ಯಾದಿ ಮೂಲ ಕಾರಣಗಳಾಗಿರುತ್ತವೆ. ಮಹಿಳೆ ಯರು ನೀರು ನಿರ್ವಹಣೆಯ ಎಲ್ಲಾ ಹಂತಗಳಲ್ಲಿ ಸಕ್ರಿಯವಾಗಿ, ಸ್ಪರ್ಧಾತ್ಮಕವಾಗಿ ಮತ್ತು ಸುಸ್ಥಿರವಾಗಿ ಭಾಗವಹಿಸಲು ಅವರಿಗೆ ಉತ್ತೇಜನ ನೀಡುವ ಬಗ್ಗೆ ಗಮನ ಹರಿಸುವುದು ಮತ್ತು ಅವರನ್ನು ಸಶಕ್ತೀಕರಣಗೊಳಿಸಲು ಪ್ರಯತ್ನಗಳನ್ನು ಮಾಡಬೇಕಾಗಿದೆ.

ಇಂದಿನ ಕೃಷಿ ಪರಿಸ್ಥಿತಿಯನ್ನು ಅವಲೋಕಿಸಿದರೆ ಕೃಷಿಯನ್ನು ತೊರೆಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಅದರಲ್ಲಿಯೂ ಯುವ ಪೀಳಿಗೆಯು ಕೃಷಿಯಿಂದ ವಿಮುಖರಾಗಲು ಇಚ್ಛಿಸುತ್ತಿದ್ದಾರೆ. ಜೊತೆಗೆ ಭೂಹಿಡುವಳಿಯೂ ಕಡಿಮೆ ಆಗುತ್ತಿದೆ. ಉದಾಹರಣೆಗೆ; ವಿಜಯನಗರ ಕಾಲುವೆಗಳ ಅಚ್ಚುಕಟ್ಟಿನಲ್ಲಿ ರೈತ ಕುಟುಂಬವೊಂದರ ಸರಾಸರಿ ಭೂ ಹಿಡುವಳಿಯು ಒಂದು ಹೆಕ್ಟೇರ್ ಇರುವುದನ್ನು ಗಮನಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಹಾಲಿ ಕೃಷಿಯಲ್ಲಿ ತೊಡಗಿಸಿಕೊಂಡಿರುವವರ, ಅದರಲ್ಲಿಯೂ ಕೃಷಿಕ ಮಹಿಳೆಯರ ಸಾಮರ್ಥ್ಯ ಹೆಚ್ಚಿಸುವುದು ಅನಿವಾರ್ಯ.

ವಿ.ಎನ್.ಸಿ ಆಧುನೀಕರಣ ಕಾರ್ಯಕ್ರಮದಲ್ಲಿ ಸಮಗ್ರ ನೀರಾವರಿ ಅಭಿವೃದ್ಧಿಯ ಗುರಿಯನ್ನು ತಲುಪಬೇಕಾದರೆ ನೀ.ಬ.ಸ. ಸಂಘಗಳಲ್ಲಿ ಪುರುಷರು ಮತ್ತು ಮಹಿಳೆಯರು ಸಮಾನವಾಗಿ ಪಾಲ್ಗೊಳ್ಳಬೇಕಾಗುತ್ತದೆ ಮತ್ತು ಅದರ ಫಲವನ್ನು ಪಡೆಯುವುದರಲ್ಲಿ ಸಹ ಸಮಾನತೆ ಸಾಧಿಸಬೇಕು.

## ಮಹಿಳೆಯರು ಮತ್ತು ದುರ್ಬಲ ವರ್ಗದವರು ಸಕ್ರಿಯವಾಗಿ ಪಾಲ್ಗೊಳ್ಳುವುದು ಹೇಗೆ?

ಮಹಿಳೆಯರು ಮತ್ತು ದುರ್ಬಲ ವರ್ಗದವರು ನೀರಾವರಿ ಆಧುನೀಕರಣ ಮತ್ತು ನಿರ್ವಹಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ;

- ಖಾತೆದಾರ ಮಹಿಳೆಯರು ಮತ್ತು ದುರ್ಬಲ ವರ್ಗದವರು ಸಂಘದಲ್ಲಿ ಸದಸ್ಯತ್ವ ಪಡೆದುಕೊಳ್ಳುವುದು;